# ಸುತ್ತೋಲೆ

## ನಮ್ಮ ಮನೆಗೆ ಅರ್ಜಿ ಆಹ್ವಾನ

'ನಮ್ಮ ಮನೆ' ಯೋಜನೆಯ ಕಾರ್ಯಕ್ರಮದಡಿ ರಾಜ್ಯದ ಪಟ್ಟಣ ಮತ್ತು ನಗರ ಪ್ರದೇಶದ ಬಡಜನರಿಗೆ ವಸತಿ ಕಲ್ಪಿಸಲು ಅವರ ನಿವೇಶನದಲ್ಲಿ ಮನೆಕಟ್ಟಲು ಅಥವಾ ಬೇರೆಯವರಿಂದ ನಿರ್ಮಿಸಲ್ಪಟ್ಟ ಮನೆ ಖರೀದಿಗಾಗಿ ನಗರದ ಬಡಜನರ ವಸತಿಗಾಗಿ ಬಡ್ಡಿ ಸಹಾಯಧನ ಯೋಜನೆ (Interest Subsidy Scheme for Housing the Urban Poor)ನ್ನು ಜಾರಿಗೊಳಿಸಲಾಗುತ್ತದೆ. ಅದರಂತೆ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಗೆ ಒಳಪಟ್ಟ ಅರ್ಹ ಫಲಾನುಭವಿಗಳು ಅರ್ಜಿಯನ್ನು ಮಂಗಳೂರು ಮಹಾನಗರಪಾಲಿಕೆಯಲ್ಲಿ 28-2-2010ರ ಮೊದಲು ಉಚಿತವಾಗಿ ಪಡೆದು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು ಫಲಾನುಭವಿಯು ಮಹಾನಗರಪಾಲಿಕೆಯ ಖಾಯಂ ನಿವಾಸಿಯಾಗಿರಬೇಕು. ಫಲಾನುಭವಿಯು ತನ್ನ ಹೆಸರಿನಲ್ಲಾಗಲೀ, ತನ್ನ ಪತಿ/ಪತ್ನಿಯ ಹೆಸರಿನಲ್ಲಾಗಲೀ ಅಥವಾ ಅವಲಂಬಿತ ಮಗುವಿನ ಹೆಸರಿನಲ್ಲಾಗಲೀ ಸ್ವಂತ ಮನೆಯನ್ನು ಹೊಂದಿರಬಾರದು. ಫಲಾನುಭವಿಯು ಮಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ನಿವೇಶನವನ್ನು ಹೊಂದಿರಬೇಕು. ಅರ್ಜಿದಾರರ ಕುಟುಂಬ ಸ್ವಂತ ಮನೆ ಅಥವಾ ಪಕ್ಕಾ ಮನೆ ಹೊಂದದಿರುವ ಬಗ್ಗೆ, ಕುಟುಂಬದ ಮಾಸಿಕ ವರಮಾನ, ಅದೇ ಸ್ಥಳದ ಖಾಯಂ ವಾಸಿಯಾಗಿರುವ ಬಗ್ಗೆ, ಪರಿಶಿಷ್ಟ ಜಾತಿ/ಪಂಗಡ, ಅಲ್ಪ ಸಂಖ್ಯಾತ ಅಥವಾ ವಿಕಲಚೇತನರಾಗಿರುವ ಬಗ್ಗೆ ಮುಂತಾದ ದೃಢೀಕರಣದ ವಿವರವನ್ನು ಹೊಂದಿರತಕ್ಕದ್ದು.

ಗರಿಷ್ಠ ರೂ 3,300/- ಮಾಸಿಕ ಆದಾಯ ಹೊಂದಿರುವ ವ್ಯಕ್ತಿಗೆ ಕನಿಷ್ಠ 25 ಚ.ಮೀ (269 ಚ.ಅಡಿ) ಮನೆ ನಿರ್ಮಾಣಕ್ಕೆ 1 ಲಕ್ಷ ರೂ ಸಾಲ ಬಡ್ಡಿ ಸಹಾಯಧನದೊಂದಿಗೆ ಹಾಗೂ ರೂ 3,301/- ರಿಂದ 7,300/- ರೂ. ಮಾಸಿಕ ಆದಾಯದ ವ್ಯಕ್ತಿಗೆ 1.6 ಲಕ್ಷ ರೂ. ಸಾಲ ಬಡ್ಡಿ ಸಹಾಯಧನದೊಂದಿಗೆ ಕನಿಷ್ಠ 40 ಚ.ಮೀ (430 ಚ.ಅಡಿ) ಮನೆ ನಿರ್ಮಾಣಕ್ಕೆ ಅಥವಾ ಮನೆ ಖರೀದಿಗೆ 15 ರಿಂದ 20 ವರ್ಷಗಳ ಅವಧಿಗೆ ಸಾಲ ಸೌಲಭ್ಯ ಸಿಗುತ್ತದೆ.

ಆದ್ದರಿಂದ ಎಲ್ಲಾ ಮ.ನ.ಪಾ. ಸದಸ್ಯರು ತಮ್ಮ ತಮ್ಮ ವಾರ್ಡಿನ ಅರ್ಹ ಫಲಾನುಭವಿಗಳಿಗೆ ಸದ್ರಿ ಯೋಜನೆಯ ಪ್ರಯೋಜನವನ್ನು ಪಡೆಯಲು ಸೂಕ್ತ ಮಾಹಿತಿ ನೀಡಬೇಕಾಗಿ ಈ ಮೂಲಕ ಕೋರಲಾಗಿದೆ.

ಜಂಟಿ ಆಯುಕ್ತರು
ಮಂಗಳೂರು ಮಹಾನಗರಪಾಲಿಕೆ

PDF Created with deskPDF PDF Writer - Trial :: http://www.docudesk.com